# ಸಾಲಾಯ ತಸ್ಮೈ ನಮಃ!

ಸುಮಾ ರಮೇಶ್

**ಮನೆ ಕಟ್ಟಲು ಸಾಲ, ಮದುವೆ ಮಾಡಲು ಸಾಲ, ಶಿಕ್ಷಣಕ್ಕೆ ಸಾಲ, ಕೆಲಸ ಪಡೆದ ಮೇಲೂ ಸಾಲ... ಸಾಲವಿಲ್ಲದ ಕಾಲವೇ ಇಲ್ಲವೇನೋ... ಅಸಲಿಗೆ, ಸಾಲವಿಲ್ಲದೆ ವ್ಯವಹಾರ ಸಾಧ್ಯವೇ? ಕಾಲಕಾಲಕ್ಕೆ ಸಾಲದ ಸ್ವರೂಪ ಬದಲಾದರೂ ಅತಿಯಾದ ಬಯಕೆಗಳು ಇರುವವರೆಗೂ ಸಾಲವೂ ಜೀವಂತ. ಸಾಲವನ್ನು ತಡೆಯೋರು ಯಾರು ಇಲ್ಲ...**

'ಸಾಲವನು ಕೊಂಬಾಗ ಹಾಲೋಗರುಂಡಂತೆ ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ...' ಎಂದು ಸಾಲದ ಬಗ್ಗೆ ಬಹಳ ಹಿಂದೆಯೇ ನಮ್ಮ ಸರ್ವಜ್ಞ ಕವಿ ಕಿವಿಮಾತು ಹೇಳಿರುವನು. ಆದರೆ ಸಾಲ ಮಾಡಿಯಾದರೂ ಗಡಿಗೆ ತುಪ್ಪ ಕುಡಿಯುವವರ ಕೀಲುಗಳು ಸಾಲದ ತುಪ್ಪದಿಂದ ಪುಷ್ಟಿ ಪಡೆದು ಮುರಿಯದಂತೆ ಭದ್ರವಾಗಿರುತ್ತವೆ.

'ಕೊಟ್ಟವ ಕೋಡಂಗಿ ಇಸ್ಕೊಂಡವ ಈರಭದ್ರ' ಎಂಬಂತೆ ಸಾಲ ನೀಡಿದವನ ಕೀಲುಗಳು ಈರಭದ್ರನ ಮನೆಗೆ ಅಲೆದು ಅಲೆದು ವಾಲಿಕೊಂಡಿರುತ್ತವೆ. ಸಾಲದೆ ಮಾಡುವ ಈ ಸಾಲ ಒಂದು ಬಗೆಯ 'ಸಾಲ್ವೆಂಟ್'ನಂತೆ. ಪಡೆದ ಹಣ ಹಿಂಟ್ ಕೊಡದಂತೆ ಹಲವು ವೆಂಟಿಲೇಶನ್ ಮುಖೇನ ಸೋರಿ ಹೋಗುವುದು. ತೆಲುಗಿನಲ್ಲಿ ಅಪ್ಪು ಎಂದರೆ ಸಾಲ. ಸಾಲದ ಹಣ ಹೆಚ್ಚಿದಷ್ಟೂ ಸೋಲಪ್ಪುವುದು ಖಚಿತ. ಅವ 'ಸಾಲಸೋಲ' ಮಾಡಿಕೊಂಡಿದ್ದ ಅದನ್ನು ತೀರಿಸಲಾಗದೆ ಸತ್ತ ಎಂಬ ಮಾತುಗಳನ್ನು ಕೇಳಿರುತ್ತೇವೆ. ಹೀಗೆ ನಿಧನರಾದವರು ಧನವಿಲ್ಲದೆ ನಿಧನರಾದರು ಎಂಬ ಸುದ್ದಿ ಹಬ್ಬುವುದು.

ಸಾಲದೊಂದಿಗೆ ಸೋಲು ಕೂಡ ತಳಕು ಹಾಕಿಕೊಂಡಿರುತ್ತದೆ. ಸಾಲ ಪಡೆದು ಮೋಜು ಮಸ್ತಿ ಮಾಡಿ ಹಣ ಉಡಾಯಿಸಿದವರದ್ದು ಒಂದು ಗುಂಪಾದರೆ, ಹಾಕಿದ ಬಂಡವಾಳ ಫಲ ನೀಡದೆ ನೆಲ ಕಚ್ಚಿದವರದ್ದು ಒಂದು ಬಗೆ. ಹಣ ಕೈ ಹತ್ತದಿದ್ದಾಗ ಸೋತು ಕೈ ಎತ್ತುವುದು ಖಚಿತ. ಆಗ ನೀಡಿದವನ ಹಣ ಉಚಿತಗಳ ಪಟ್ಟಿಗೆ ಸೇರಿ ಮನ್ನಾ ಲೆಕ್ಕದ ಗುನ್ನವೇ ಗತಿಯಾಗುವುದು. ಸಾಲ ಕೊಟ್ಟವ ಕೊಂಚ ಬಲಿಷ್ಠನಾಗಿದ್ದರೆ 'ಏ... ಸಾಲೇ...' ಎನ್ನುತ್ತಾ ಅವನ ಕೊರಳಪಟ್ಟಿ ಹಿಡಿದು ಧಮಕಿ ಹಾಕುವನು. ಆದರೆ ಎಲ್ಲವನ್ನೂ ಕಳೆದುಕೊಂಡು ಖಾಲಿಯಾದವನ ಹಟ್ ಬಳಿ ಹೋದರೆ 'ಡೆಟ್' ಕ್ಲಿಯರ್ ಆಗದು. ಡೆಟ್‌ಗಳಲ್ಲಿ ರಿಕವರಿ ಆಗುವ ಡೆಟ್ ಪ್ರತಿ ಶತ ಹತ್ತು. ಇನ್ನು ತೊಂಬತ್ತು ಬರೀ ಕೈಎತ್ತು! 'ಗೀವ್ ಮಿ ಅ ಲೋನ್ ದೆನ್ ಲೀವ್ ಮಿ ಅಲೋನ್' ಎನ್ನುವವರೇ ಹೆಚ್ಚು. ಈ ರಗಳೆಯೇ ಬೇಡವೆಂದು ಕೆಲವು ಅಂಗಡಿಗಳಲ್ಲಿ ವಿಶೇಷ ನುಡಿಗಟ್ಟುಗಳ ಫಲಕಗಳಿಗೆ ಅಂದವಾದ ಕಟ್ಟು ಹಾಕಿಸಿ ಇಟ್ಟಿರುತ್ತಾರೆ. 'ಗ್ರಾಹಕರೇ ನಮ್ಮ ದೇವರು. ದೇವರಿಗೆ ಸಾಲ ಕೊಡುವಷ್ಟು ನಾವು ದೊಡ್ಡವರಲ್ಲ', 'ಸಾಲ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ', 'ಸಾಲ ಪಡೆದು ಸೇಠ್ ತರಹ ಡೇಟ್ ಮೇಲೆ ಡೇಟ್ ಹೇಳಬೇಡಿ', 'ಸಾಲ ಕೊಡುವುದಕ್ಕೆ ನಾವೇನು ಸರ್ಕಾರವಲ್ಲ ಕೇಳೋಕ್ಕೆ ನೀವೇನು ವಿಜಯ ಮಲ್ಯ ಅಲ್ಲ'... ಇಂತಹ ವಿಡಂಬನಾತ್ಮಕ ಬೋರ್ಡ್‌ಗಳು ಸಾಲ ಹುಟ್ಟದೆಂಬ ಸಂದೇಶವನ್ನು ಸಾರುತ್ತವೆ.

ಎಷ್ಟೋ ಸಂದರ್ಭಗಳಲ್ಲಿ ನಮ್ಮ ಕನಸು ದೊಡ್ಡದಾಗಿರುತ್ತದೆ, ಜೇಬು ಚಿಕ್ಕದಾಗಿರುತ್ತದೆ. ಕನಸು ಹಾಗೂ ಜೇಬಿನ ನಡುವೆ ಬ್ಯಾಲೆನ್ಸ್ ಮಾಡಲಾಗದೇ ಸಾಲದ ಮನೆಯ ಬಾಗಿಲು ತಟ್ಟಬೇಕಾಗುವುದು. ಸಾಲವನ್ನು ನೀಡಿದ ವ್ಯಕ್ತಿ, ಬ್ಯಾಂಕು, ಹಣಕಾಸು ಸಂಸ್ಥೆಗಳಿಗೆ ನಿಯಮಿತವಾಗಿ ಬಡ್ಡಿಯನ್ನು ಪಾವತಿಸದಿರೆ ಅದು ಹೆಮ್ಮರವಾಗಿ ಥೈಲಿ ಖಾಲಿಯಾಗಿ ಬ್ಯಾಲೆನ್ಸ್ ಶೀಟ್ ಟ್ಯಾಲಿಯಾಗದೆ ಸಾಲ ಶೂಲವಾಗುವುದು.

ಅಸಲಿಗೆ ಸಾಲವಿಲ್ಲದೆ ವ್ಯವಹಾರ ಸಾಧ್ಯವೇ!? ಸ್ವತಂತ್ರ ಸರ್ಕಾರ ಬಂದಾಗಿನಿಂದ ಅದು ಶ್ರೀಮಂತ ದೇಶಗಳಿಂದ ಕೋಟ್ಯಂತರ ರೂಪಾಯಿ ಸಾಲ ಎತ್ತುತ್ತಲೇ ಇದೆ. ದೇವಾನುದೇವತೆಗಳೂ ಈ ಸಾಲದ ಶೂಲದಲ್ಲಿ ಬಿದ್ದವರೇ! ಭೃಗು ಮಹರ್ಷಿ ವಿಷ್ಣುವಿನ ಎದೆಗೆ ಒದ್ದಾಗ ಅಲ್ಲಿ ನೆಲೆಸಿದ್ದ ಲಕ್ಷ್ಮಿ ಮುನಿಸಿಕೊಂಡು ಭೂಲೋಕಕ್ಕೆ ಬರುವಳು. ಭೂಲೋಕದಲ್ಲಿ ಪದ್ಮಾವತಿಯಾಗಿ ಜನಿಸಿದ ಲಕ್ಷ್ಮಿಯನ್ನು

